ಗಾಂಧಿನಗರ ಪೋಸ್ಟ್

# ಭರವಸೆಯ ಕಿರಣ




**ಧಾರಾವಾಹಿ, ರಿಯಾಲಿಟಿ ಶೋ, ಸಿನಿಮಾಗಳ ನಿರ್ದೇಶನ ತಂಡದಲ್ಲಿ ಹಲವು ವರ್ಷ ಕೆಲಸ ಮಾಡಿರುವ ಕಿರಣ್ ಸ್ವಾಮಿ, ಆ ಅನುಭವಗಳನ್ನು ಒಟ್ಟಾಗಿಸಿ ಸಿನಿಮಾ ನಿರ್ದೇಶನಕ್ಕಿಳಿದಿದ್ದಾರೆ. 'ದಿ ಡಾರ್ಕ್ ವೆಬ್' ಹೆಸರಿನ ಸಿನಿಮಾ ನಿರ್ದೇಶಿಸಿದ್ದಾರೆ.**

**■ ಸುಮಲತಾ ಎನ್**



ಹೈಸ್ಕೂಲ್ ಓದುವಾಗ ಪತ್ರಿಕೆಯ ಸಿನಿಮಾ ಸುದ್ದಿಗಳನ್ನು ಒಂದಕ್ಷರವೂ ಬಿಡದಂತೆ ಓದುತ್ತಿದ್ದ ಹಾಸನದ ಕಿರಣ್ ಸ್ವಾಮಿ ಅವರಿಗೆ ಮುಂದೆಂದಾದರೂ ತಾವೂ ಸಿನಿಮಾ ಕ್ಷೇತ್ರದೆಡೆಗೆ ಹೋಗಬೇಕೆಂಬ ಸಣ್ಣ ಹಂಬಲವೂ ಆಗಲೇ ಹುಟ್ಟಿಕೊಂಡಿತ್ತು. ಶಾಲೆಯಲ್ಲಿ ನಡೆಯುತ್ತಿದ್ದ ಪ್ರಬಂಧ, ಕಥಾಸ್ಪರ್ಧೆಗಳಲ್ಲಿ ಬಹುಮಾನ ಪಡೆಯುತ್ತಿದ್ದುದು ಅವರಲ್ಲಿ ಈ ಆಸೆ ಗಟ್ಟಿಯಾಗಿ ಬೇರೂರಲು ಕಾರಣವೂ ಆಗಿತ್ತು.

ಹಾಸನದ ಕಲಾಭವನಕ್ಕೆ ನಾಟಕ ಮಾಡಲು ಬಂದಿದ್ದ ಕಲಾವಿದ ಮೋಹನ್ ಜುನೇಜ ಅವರೊಂದಿಗಿನ ಭೇಟಿ, ಕಿರಣ್ ಅವರಲ್ಲಿ ಸಿನಿಮಾ ಬಗೆಗಿನ ಆಸಕ್ತಿ ಇನ್ನಷ್ಟು ಹೆಚ್ಚಾಗಲು ಕಾರಣವಾಯಿತು.

ಪಿಯುಸಿ ಮುಗಿಸಿ ಐಟಿಐ ತರಬೇತಿ ಪಡೆದ ನಂತರ ಅವರು ನೇರ ಕಾಲಿಟ್ಟಿದ್ದು ಕಿರುತೆರೆಗೆ. ಮೋಹನ್ ಜುನೇಜ ಅವರ ಮುಖಾಂತರ ಕಿರುತೆರೆಗೆ ಕಾಲಿಟ್ಟ ಅವರು, ಧಾರಾವಾಹಿ ನಿರ್ದೇಶನದಲ್ಲಿ ತೊಡಗಿದ್ದ ಸತೀಶ್ ಕೃಷ್ಣ, ಆರೂರು ಜಗದೀಶ್ ಅವರ ಬಳಿ ಕೆಲಸ ಮಾಡಿದರು. 'ಬದುಕು', 'ಲಕ್ಷ್ಮಿ ಬಾರಮ್ಮ', 'ಅರುಂಧತಿ', 'ಮಡದಿ' — ಹೀಗೆ ಹಲವು ಧಾರಾವಾಹಿಗಳಲ್ಲಿ ಸಹಾಯಕ ನಿರ್ದೇಶಕರಾಗಿ ದುಡಿದರು. ಧಾರಾವಾಹಿ ಜೊತೆಜೊತೆಗೆ 'ಡ್ಯಾನ್ಸಿಂಗ್ ಸ್ಟಾರ್', 'ಸೂಪರ್ ಮಿನಿಟ್', 'ಸೂಪರ್ ಟಾಕ್ ಟೈಂ' ರಿಯಾಲಿಟಿ ಶೋಗಳ ಅನುಭವಗಳನ್ನು ಪಡೆದುಕೊಂಡರು.

'ರಾಜಾಹುಲಿ' ಸಿನಿಮಾದಲ್ಲಿ ಗುರು ದೇಶಪಾಂಡೆ ಅವರ ಬಳಿ ಕೆಲಸ ಮಾಡಿದ್ದು ಸಿನಿಮಾರಂಗದ ಹೊಸ ಅನುಭವಗಳನ್ನು ತಂದುಕೊಟ್ಟಿತ್ತು. ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಅವರೀಗ ಸ್ವತಂತ್ರವಾಗಿ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಸೈಬರ್ ಕ್ರೈಂ ಆಧರಿತ 'ದಿ ಡಾರ್ಕ್ ವೆಬ್' ಸಿನಿಮಾ ನಿರ್ದೇಶಿಸಿದ್ದಾರೆ.

'ದಿ ಡಾರ್ಕ್ ವೆಬ್' ಸೈಬರ್ ಕ್ರೈಂ ಜಾನರ್ ಕಥೆಯಾಗಿದ್ದು, ಸಮಾಜದಲ್ಲಿ ಪ್ರಸ್ತುತ ನಡೆಯುತ್ತಿರುವ ಸೈಬರ್ ಕ್ರೈಂ ಘಟನೆಗಳನ್ನು ಆಧರಿಸಿ ಸಿನಿಮಾ ರೂಪಿಸಲಾಗಿದೆ. ನಮಗೇ ಗೊತ್ತಿಲ್ಲದೆ ನಮ್ಮ ಮೊಬೈಲ್, ಕಂಪ್ಯೂಟರ್ ಬಳಸಿ ಏನೆಲ್ಲಾ ಕ್ರೈಂ ನಡೆಯುತ್ತಿವೆ, ನಮ್ಮನ್ನು ಎಂಥ ಕತ್ತಲೆಯ ಕೂಪಕ್ಕೆ ತಳ್ಳುತ್ತಿವೆ, ಆ ಕತ್ತಲೆಯ ಜಗತ್ತು ಹೇಗಿರುತ್ತದೆ ಎಂಬ ಕುರಿತು ಒಂದು ಸಂದೇಶವನ್ನೂ ಸಿನಿಮಾದಲ್ಲಿ ನೀಡಲಾಗಿದೆಯಂತೆ.

'ಮೊದಲ ಸಿನಿಮಾ ಹಲವು ಅನುಭವಗಳನ್ನು ಕೊಟ್ಟಿದೆ. ಈ ಮುನ್ನ ಸಿನಿಮಾ ಮಾಡಲು ಹೊರಟು ಆರಂಭದಲ್ಲೇ ಎಡವಿದ್ದೆ. ಆ ಹತಾಶೆಯಲ್ಲಿದ್ದಾಗಲೇ ಈ ಸಿನಿಮಾ ಕೈಗೂಡಿದ್ದು ಹೊಸ ಚೈತನ್ಯ ತುಂಬಿದೆ. ಸಿನಿಮಾ ಕಥೆ, ಕಲಾವಿದರು, ತಾಂತ್ರಿಕ ವರ್ಗ — ಹೀಗೆ ಎಲ್ಲಾ ವಿಷಯದಲ್ಲೂ ನಿರ್ದೇಶನದ ಮೊದಲ ಪ್ರಯೋಗ ಸಾಕಷ್ಟು ಹೊಸತನ್ನು ಕಲಿಸಿದೆ' ಎಂದು ತಮ್ಮ ಚೊಚ್ಚಲ ಸಿನಿಮಾ ನಿರ್ದೇಶನ ನೀಡಿದ ಅನುಭವಗಳನ್ನು ಉತ್ಸುಕರಾಗಿ ಹಂಚಿಕೊಳ್ಳುತ್ತಾರೆ ಕಿರಣ್.

ಆ ಪ್ರಯೋಗಗಳಲ್ಲಿ 'ಹೊಸತನ' ಕಂಡುಕೊಳ್ಳುವುದು ಬಹುಮುಖ್ಯವಾದುದು ಎಂದು ಹೇಳುತ್ತಾರೆ ಅವರು. ನಮ್ಮ ಸುತ್ತಮುತ್ತಲಿನ ಆಗುಹೋಗುಗಳನ್ನು, ನಮ್ಮ ನೆಲದ ಸೊಗಡನ್ನು, ಈಗಿನವರಿಗೆ ಹಳೆಯ ವಿಷಯವನ್ನು ಹೊಸ ಧಾಟಿಯಲ್ಲಿ ನೀಡಬೇಕು ಎನ್ನುತ್ತಲೇ, ಈಗಿನ ಟ್ರೆಂಡ್‌ಗೆ ತಕ್ಕಂತೆ ಅಪ್‌ಡೇಟ್ ಆಗಬೇಕಾದುದು ನಿರ್ದೇಶಕನಿಗೆ ಅತ್ಯವಶ್ಯಕ ಎನ್ನುತ್ತಾರೆ.

'ಈಗ ಸಿನಿಮಾ ರಿಲೀಸ್ ಮಾಡುವುದೇ ದೊಡ್ಡ ಸವಾಲು. ಪ್ರೊಮೋಷನ್ ಮಾಡುವುದು ಇನ್ನೂ ಕಷ್ಟ. ಸಿನಿಮಾದಷ್ಟೇ ಹಣವನ್ನು ಪ್ರೊಮೋಷನ್‌ಗೂ ಖರ್ಚು ಮಾಡಬೇಕು. ಪ್ರೇಕ್ಷಕರಿಗೆ ಇಷ್ಟವಾಗುವಂತೆ ಕಥೆಯ ಎಳೆಯನ್ನು ವಿಷುಯಲೈಸ್ ಮಾಡಿ ಸಿನಿಮಾ ಹೆಣೆಯಬೇಕು. ಎಷ್ಟೇ ಯೋಚಿಸಿದರೂ ತಿಳಿಯದ್ದು ಯಾವುದೋ ಕ್ಷಣದಲ್ಲಿ ಮ್ಯಾಜಿಕ್‌ನಂತೆ ಹೊಳೆದುಬಿಡುತ್ತದೆ' ಎಂದು ತಮ್ಮ ಅನುಭವ ವ್ಯಕ್ತಪಡಿಸುತ್ತಾರೆ.

ಒಂದೇ ಜಾನರ್‌ಗೆ ತಮ್ಮನ್ನು ತಾವು ಸೀಮಿತಪಡಿಸಿಕೊಳ್ಳುವುದಿಲ್ಲ ಎನ್ನುವ ಕಿರಣ್ ಅವರಿಗೆ, ಕ್ರೈಂ, ಹಾರರ್ ಏನೆಲ್ಲಾ ಸಾಧ್ಯವೋ ಆ ಎಲ್ಲಾ ಪ್ರಕಾರದಲ್ಲಿಯೂ ತಮ್ಮನ್ನು ಪ್ರಯೋಗಿಸಿಕೊಳ್ಳುವ ಹಂಬಲ. ■